International Journal of Kannada Research
www.kannadajournal.com

**ISSN: 2454–5813**
IJKR 2018; 4(2): 08-11
© 2018 IJKR
www.kannadajournal.com
Received: 03-02-2018
Accepted: 04-03-2018

**ಸೋಮನಾಯಕ.ಎಂ**
ಸಂಶೋಧಕರು
ಜೈನಶಾಸ್ತ್ರ ಮತ್ತು ಪ್ರಾಕೃತ
ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**Correspondence**
**ಸೋಮನಾಯಕ.ಎಂ**
ಸಂಶೋಧಕರು
ಜೈನಶಾಸ್ತ್ರ ಮತ್ತು ಪ್ರಾಕೃತ
ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

# ಐತಿಹಾಸಿಕ ಹಿನ್ನೆಲೆಯಲ್ಲಿ ಶ್ರೀಕ್ಷೇತ್ರ ಕನಕಗಿರಿ: ಒಂದು ಅವಲೋಕನ

**ಸೋಮನಾಯಕ.ಎಂ**

ಅರಿಕುಠಾರ ಎಂಬ ಹೆಗ್ಗಳಿಕೆಗೆ ಪಾತ್ರವಾದ ಚಾಮರಾಜನಗರ ಜಿಲ್ಲೆಯು ಐತಿಹಾಸಿಕವಾಗಿ ಮತ್ತು ಪಾರಂಪರಿಕವಾಗಿ ಮತ್ತು ಧಾರ್ಮಿಕವಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಚಾಮರಾಜನಗರ ಜಿಲ್ಲಾ ಕೇಂದ್ರದಿಂದ 24 ಕಿ.ಮೀ. ದೂರದಲ್ಲಿರುವ ಮಲೆಯೂರು 'ಅತಿಶಯ ಸಿದ್ಧಕ್ಷೇತ್ರ ಕನಕಗಿರಿ' ಜಗತ್ತಿನ ಸುಪ್ರಸಿದ್ಧ ಜೈನಕೇಂದ್ರಗಳಲ್ಲಿ ಒಂದಾಗಿದೆ. ಕನಕಗಿರಿಯ ಬೆಟ್ಟವನ್ನು 'ನಾಕೋಪಮಾನ' ಶೈಲಿ ಎಂದರೆ ಸ್ವರ್ಗದಂತಿರುವ ಶಿಖರವೆಂದೇ ಇತಿಹಾಸಕಾರರು ಬಣ್ಣಿಸಿದ್ದಾರೆ. ಪೂರ್ವವೃತ್ತಾಂತಗಳ ಮಹಾತ್ಮೆಗಳಿಂದಲೂ "ಜನಶೃತಿಗಳಿಂದಲೂ" ಪುರಾಣ ಗ್ರಂಥಗಳಿಂದಲೂ ತಿಳಿದು ಬರುವಂತೆ ಈ ಕ್ಷೇತ್ರದ ಮಹಿಮೆ ಅಪಾರವಾದುದು. ಈ ಬೆಟ್ಟದ ವಿಶಾಲ ಬಂಡೆಗಳ ಮೇಲೆ ಶಾಶ್ವತವಾಗಿ ಕೆತ್ತಿರುವ ಚರಣ ಪಾದುಕೆಗಗಳು, 'ಶಿಲಾಶಾಸನಗಳು' ಸಮಾಧಿ ಮಂಟಪ ಗುಹೆ ಸಮಾಧಿಗಳು ಈ ಕ್ಷೇತ್ರದ ಮಹಿಮೆಯನ್ನು ಸಾರುತ್ತವೆ. ಸೂರ್ಯಪುರದ ಮಹಾ ತಪೋಧನರಾದ ಸುಪ್ರಸಿಷ್ಯ ಮುನಿಗಳು ತಮ್ಮ ತಪಃ ಪ್ರಭಾವದಿಂದಲೂ ಕೇವಲ ಜ್ಞಾನ ಪಡೆದು ಕರ್ಮಕ್ರಮ ಮಾಡಿ ಈ ಬೆಟ್ಟದ ಮೇಲೆ ಮುಕ್ತಿಯನ್ನು ಪಡೆದರೆಂದು ತಿಳಿದು ಬರುತ್ತದೆ. ಜ್ಞಾನಚಂದ್ರಮುನಿಗಳು ತಮ್ಮ ಘೋರ ತಪಸ್ಸಿನ ಫಲದಿಂದ ಕೈವಲ್ಯ ಜ್ಞಾನ ಪಡೆದು ಗಂದಕುಟಿ ಸಭೆಯಲ್ಲಿ ಭವ್ಯರಿಗೆ ಧರ್ಮೋಪದೇಶ ಮಾಡುತ್ತಾ ಅನೇಕ ದಿಗ್ದೇಶಗಳಲ್ಲಿ ವಿಹಾರ ಮಾಡಿ ನಂತರ ತಮ್ಮ ಅಯುಷ್ಯವು ಒಂದು ತಿಂಗಳಿರುವಾಗ ಗಂಧಕುಚಿಯನ್ನು ವಿಸರ್ಜಿಸಿ ಕನಗರಿ ಶಿಖರವನ್ನೇರಿ ಚಂದ್ರಕಾಂತ ಶಿಲಾತಲದಲ್ಲಿ ಪಲ್ಯಂಕಾಸನ ಯೋಗದಲ್ಲಿ ಕುಳಿತ ಅಘಾಲೆಕರ್ಮಗಳನ್ನು ನಾಶಮಾಡಿ ಅನಂತ ಜ್ಞಾನದರ್ಶನ ಸುಖ, ಬಲ ಸಂಪನ್ನರಾಗಿ ಮೋಕ್ಷವನ್ನು ಪಡೆದರು. ಅಂದಿನಿಂದ ಈ ಕ್ಷೇತ್ರ ಅತಿಶಯ ಸಿದ್ಧಕ್ಷೇತ್ರವೆಂದು ಪುರಾಣ ಪ್ರಸಿದ್ಧವಾಗಿದೆ.

ಕನಕಗಿರಿ ಕ್ಷೇತ್ರವು ಪುರಾತನ ಕಾಲದಿಂದಲೂ ಪ್ರಸಿದ್ಧಿಯಾಗಿ ಅತಿಶಯ ಮಹಾತ್ಮೆಯಿರುವ, ಜೈನರ ಯಾತ್ರಾಸ್ಥಳವಾಗಿದೆ.ಜೈನ ಆಚಾರರ್ಯರೆನಿಸಿರುವ ಶ್ರೀ ಪೂಜ್ಯಪಾದರು ತಮ್ಮ ಸೋದರಳಿಯನಾದ ನಾಗಾರ್ಜುನನ ಜೊತೆಯಲ್ಲಿ ಈ ಕನಕಗಿರಿ ಕ್ಷೇತ್ರದಲ್ಲಿದ್ದು ತಮ್ಮ ಜೀವಿತದ ಬಹುಭಾಗವನ್ನು ಈ ಪವಿತ್ರ ಕ್ಷೇತ್ರದಲ್ಲೇ ಕಳೆದು, ಇದನ್ನೆ ತಮ್ಮ ತಪೋ ಭೂಮಿಯನ್ನಾಗಿ ಮಾಡಿಕೊಂಡು ಈ ಕ್ಷೇತ್ರದ ಮಹಿಮೆಯನ್ನು ಹೆಚ್ಚಿಸಲು ಕಾರಣ ಕರ್ತರಾದರು.

ತಮ್ಮ ಜೀವಿತದ ಅಂತಿಮ ದಿನಗಳನ್ನು ಇಲ್ಲೇ ಕಳೆದು ಹಲವು ರೀತಿಯ ಜೈನ ಧರ್ಮಕ್ಕೆ ಅನುಸಾರವಾದ ವ್ರತಗಳನ್ನು ಆಚರಿಸಿ ನಿರ್ವಾಣ ಹೊಂದಿದರು ಎಂದು ಐತಿಹ್ಯವಿದೆ. ಇದಕ್ಕೆ ಪೂರಕವಾದಂತಹ ನಿಖರವಾದ ಆಧಾರಗಳಲ್ಲಿ ಒಂದಾಗಿ ಶ್ರೀ ಪೂಜ್ಯಪಾದ ಶ್ರೀಪಾದರ ಚಿಹ್ನೆಯೂ ಇಲ್ಲಿದುದ, ಈಗಲೂ ಅದಕ್ಕೆ ಪೂಜೆ ನಡೆಯುತ್ತಿದೆ. ಆದರೆ ಈ ಐತಿಹ್ಯಕ್ಕೆ ಪೂಜ್ಯಪಾದ ಚರಿತೆಯಲ್ಲಿ ಆಧಾರವಿಲ್ಲ. ಶ್ರೀಪೂಜ್ಯಪಾದರ ಕಾಲವನ್ನು ಕ್ರಿ.ಶ.5ನೇ ಶತಮಾನವೆಂದು ಅಭಪ್ರಾಯ ಪಡಲಾಗಿದೆ.

ಶಾಲಿವಾಹನ ಶಕೆ 301ನೇ ಇಸವಿಯಲ್ಲಿ ಪ್ರಮಾಥಿ ಸಂವತ್ಸರ ಎಂದರೆ ಕ್ರಿ.ಶ.379 ನೇ ಇಸವಿಯಲ್ಲಿ ನಾಗಾರ್ಜುಜನನಿಗೆ ಕ್ಷೇತ್ರಾಧಿದೇವತೆ ಪದ್ಮಾವತಿ ಅಮ್ಮನವರು ಪ್ರತ್ಯಕ್ಷವಾಗಿ ಸಿದ್ಧ ರಸವಿದ್ಯೆಯನ್ನು (ಲೋಹವನ್ನು ಚಿನ್ನವನ್ನಾಗಿ ಮಾಡುವ ವಿದ್ಯೆ) ಅನುಗ್ರಹಿಸಿದಾಗ ಈ ಬೆಟ್ಟವನ್ನೆಲ್ಲಾ ಚಿನ್ನದ ಬೆಟ್ಟವನ್ನಾಗಿ ಮಾಡಬೇಕೆಂದು ಅವನು ತೊಡಗುತ್ತಾನೆ. ಆದರೆ ದೇವಿ ಮತ್ತು ಬ್ರಹ್ಮದೇವರು ಈ ಕಾರ್ಯವು ಯಶಸ್ವಿಯಾಗಲು ಬಿಡುವುದಿಲ್ಲ. ಆದರೂ ಅಂದಿನಿಂದ ಈ ಬೆಟ್ಟದಲ್ಲಿ 14 ಅಂಕಣದ ದೇವಾಲಯವನ್ನು ಕಟ್ಟಿಸಿದ, ಶ್ರೀಪಾರ್ಶ್ವ ತೀರ್ಥಂಕರರು, ಪದ್ಮಾವತಿ ಅಮ್ಮನವರು, ಬ್ರಹ್ಮ ದೇವರು, ಜ್ಞಾಲಮಾಲಿನಿ ಅಮ್ಮನವರು, ಕೂಷ್ಮಾಂಡಿನಿ ಅಮ್ಮನವರು, ಕುದುರೆ ಬ್ರಹ್ಮದೇವರು ಈ ಬಿಂಬಗಳನ್ನು ಪ್ರತಿಷ್ಠಾಪನೆ ಮಾಡಿಸಿದರು. ಕೊಳ–ಬಾವಿಗಳನ್ನು ನಿರ್ಮಾಣ ಮಾಡಿಸಿದರು.

'ಮಹಾಶಾಸ್ತ್ರ'ದ ಕತೃ ಮುನಿ ವರ್ಧಮಾನರು ಕನಕಾಚಲ ಅಥವಾ ಕನಕಗಿರಿಯ ಶ್ರೀಪಾರ್ಶ್ವನಾಥನ ಸ್ತುತಿ ಮಾಡಿಸಿದ್ದಾರೆ.ಬೆಟ್ಟದ ತಪ್ಪಲಿನಲ್ಲಿ ಕೊಳಂಗೆರೆ, ಕ್ಷೇತ್ರಕ್ಕೆ ಪಶ್ಚಿಮದಲ್ಲಿ ಗವಿಹಳ್ಳದ ಬಾವಿ

(ನಾಗಾರ್ಜುನ ಬಾವಿ ಎಂದೂ ಪ್ರತೀತಿ) ಮುಂತಾದವುಗಳನ್ನು ನಿರ್ಮಾಣ ಮಾಡಿಸಿದನು.ದೇವಾಲಯದ ಸುತ್ತಲೂ ಎಸಳಗೆ ಬೇಲಿಯನ್ನು ಹಾಕಿಸಿದರು.ಕ್ರಿ.ಶ. 380ನೇ ಇಸವಿಯಲ್ಲಿ ಬೆಟ್ಟದ ಸುತ್ತಲೂ ಇದ್ದ 8 ಗ್ರಾಮಗಳನ್ನು (ಛಲದಂಕಪುರ, ಕುಂತೂರು, ಕುಲಗಾಣ, ಕನ್ನರಿಪುರ, ಮುಡ್ಕಾಕುಂಡು, ಪಡುವಲಪುರಿ, ಕಿರಲೀಘುರ) ದೇವಾಲಯಕ್ಕೆ ಸರ್ವಮಾನ್ಯವಾಗಿ ಸರ್ವಮಾನ್ಯವಾಗಿ ಬಿಡಿಸಿದರು.ಇದು ಸುಮರು 272 ವರ್ಷಗಳ ಕಾಲ ನಡೆದು, ಗ್ರಾಮಗಳೆಲ್ಲ ಒಂದೊಂದಾಗಿ ಕೈಬಿಟ್ಟು ಹೋದವು. ಕ್ರಿ.ಶ. 653 ರಲ್ಲಿ ಸತ್ಯಂಧರ ಚೋಳನು ಛಲದಂಕಪುರನ್ನು ಮಾತ್ರ ಸರ್ವಮಾನ್ಯವಾಗಿ ಉಳಿಸಿದರು. ಕ್ರಿ.ಶ.837 ರಲ್ಲಿ ದೇಶಕ್ಕೆ ಬಂದ ಭೀಕರ ಕ್ಷಾಮದಿಂದಾಗಿ ಇದ್ದ ಒಂದು ಗ್ರಾಮವೂ ಸಹ ಕೈಬಿಟ್ಟು ಹೋಯಿತು.

ಶಾಲಿವಾಹನ ಶಕೆ ಕ್ರಿ.ಶ. 916–17ರಲ್ಲಿ ಗಂಗರ 1ನೇ ಬೂತುಗನ ಮಗ ಎರೆಯಂಗನ ಆಳ್ವಿಕೆಯ ಕಾಲದಲ್ಲಿ ಕನಕಗಿರಿಯಲ್ಲಿ 'ಮಲಯೂರ' ಎಂಬವವನ ಬಸದಿಯನ್ನು ಕಟ್ಟಿಸಿದ ವಿಷಯವು ಅಟ್ಟಿದೆರೆ ಮತ್ತು ಕುರುದೆರೆ ಸೇರಿದಂತೆ ಸಾಮಂತ ದೆರೆಯಿಂದ ಬಂದ ವರಮಾನವನ್ನು ದೊರೆಯ ಸಮ್ಮುಖದಲ್ಲಿ ಕನಕಸೇನ ಭಟ್ಟಾರಕರಿಗೆ ಕೊಟ್ಟ ವಿಷಯವು ಮದ್ದೂರು ತಾಲ್ಲೂಕು ಕೂಲಿಗೆರೆಯ ಶಾಸನದಲ್ಲಿ ಪ್ರತಿಪಾದಿತವಾಗಿದೆ.

ಶಾಲಿವಾಹನ ಶಕೆ 1052 ರಲ್ಲಿ (ಕ್ರಿ.ಶ.1130) ಹಸ್ತಿಮಲ್ಲಿ ಷೇಣಾಚಾರ್ಯರೆಂದ ಯತಿಗಳು ಉತ್ತರ ದೇಶದಿಂದ ಬಂದು ನಾಗಾರ್ಜುನನು ಕಟ್ಟಿಸಿದ 14 ಅಂಕಣ ದೇವಸ್ಥಾನಕ್ಕೆ 12 ಅಂಕಗಣಗಳನ್ನು ಸೇರಿಸಿ ದೇವಾಲಯವನ್ನು ಜೋರ್ಣೋದ್ಧಾರ ಮಾಡಿಸಿದರಲ್ಲದೇ 1ನೇ ಬಲ್ಲಾಳರಾಯನಿಂದ ದೇವಾಸ್ಥಾನಕ್ಕೆ 4 ಗ್ರಾಮಗಳನ್ನು ಸರ್ವಮಾನ್ಯವಾಗಿ ಬಿಡಿಸಿ, ಪೂಜಾಕಾರ್ಯಗಳು ಸಾಂಗವಾಗಿ ನಡೆಯುವಂತೆ ಮಾಡಿದರು. ಕ್ರಿ.ಶ.1178 ರವರೆವಿಗೂ ಇದು ನಡೆದು ಬಂದು ಗ್ರಾಮಗಳೆಲ್ಲಾ ಮತ್ತೊಮ್ಮೆ ಹಲವು ಕಾರಣಗಳಿಂದ ಕೈಬಿಟ್ಟು ಹೋದವು. ಕ್ರಿ.ಶ.1178ನೇ ಇಸವಿಯಲ್ಲಿ ಬೆಟ್ಟವರ್ಧನರಾಯನು ವೈಷ್ಣವ ಮತಾವಲಂಬಿಯಾಗಿ ವಿಷ್ಣುವರ್ಧನನಾದಾಗ ಈ ಕ್ಷೇತ್ರಕ್ಕೆ ಸೇರಿದ್ದ ಎಲ್ಲಾ ಗ್ರಾಮಗಳು ಕೈತಪ್ಪಿ ಅರಮನೆಯ ಆಡಳಿತಕ್ಕೆ ಸೇರಿಕೊಂಡವು.

ಹೊಯ್ಸಳರ 1ನೇ ನರಸಿಂಹನ ಮಗ 2ನೇ ಬಲ್ಲಾಳ (ಕ್ರಿ.ಶ. 1173–1220) ಈ ಹಿಂದೆ ಕ್ಷೇತ್ರಕ್ಕೆ ಪೂಜಾಕಾರ್ಯಕ್ಕಾಗಿ ಬಿಟ್ಟಿದ್ದ 8 ಗ್ರಾಮಗಳ ಪೈಕಿ ಛಲದಂಕಪುರ, ಪಡುವಣ ಹಾಲ್ಕುಂಡು, ಮೂಡಣ ಹಾಲ್ಕೂಂಡು, ಕುಂತೂರು, ಕಿನ್ನರಿಪುರ ಈ 5 ಗ್ರಾಮಗಳನ್ನು ಸರ್ವಮಾನ್ಯವಾಗಿ ಬಿಡಿಸಿದನು.ಅಂದಿನಿಂದ ಪೂಜಾಕಾರ್ಯಕ್ಕೆ ಅನುಕೂಲವಾಯಿತು.

ಕನಕಗಿರಿ ಬಸದಿಯ ಪ್ರಾಕಾರದಲ್ಲಿನ ಚಪ್ಪರ ಮಂಟಪದಲ್ಲಿರುವ ಕಲ್ಲಿನ ಶಾಸನವು ಶ್ರೀ ವಿದ್ಯಾನಂದ ಸ್ವಾಮಿಗಳನ್ನು "ಶ್ರೀ ವಿದ್ಯಾನಂದ ಸ್ವಾಮಿನಃ" ಎಂಬ ಮಾತಿನಿಂದ ಸ್ಮರಿಸಿದೆ.ಶ್ರೀಮತ್ ಅಚ್ಯುತ್ ರಾಜೇಂದ್ರನಿಂದ ಕೊಡಲ್ಪಟ್ಟ ಒಳ್ಳೆಯ ಮಗನೂ, ಶ್ರೀಮತ್ ಅಚ್ಯುತ್ ವಿರೇಂದ್ರ ಶ್ರೀಕಶ್ಯಪ ಎಂಬ ಹೆಸರುಳ್ಳ ರಾಜಶ್ರೇಷ್ಠನಾಗಿದ್ದು ಶ್ರೇಷ್ಠ ಜೈನ ಬ್ರಾಹ್ಮಣ ಕುಲದಲ್ಲಿ ಹುಟ್ಟಿಸಿದವನು.ಜೈನ ಧರ್ಮವೆಂಬ ಕಮಲಕ್ಕೆ ಸೂರ್ಯನೂ, ಸಕಲ ಶಾಸ್ತ್ರಗಳನ್ನು ಬಲ್ಲವನು. ಶ್ರೇಷ್ಠ ಪಂಡಿತರ ಸಮೂಹದಿಂದ ಸೇವಿಸಲ್ಪಡುವವನು, ಮುನಿಜನರ ಪಾದ ಭಕ್ತನೂ, ಬಂಧು ಸತ್ಕಾರದಲ್ಲಿ ದಕ್ಷನಾದವನು.ರಾಜ ವೈದ್ಯನು, ಈ ಭೂ ಮಂಡಲದಲ್ಲಿ ಬೆಳಗುತ್ತಿದ್ದಾನೆ. ಈತನೇ ಧರಣಿಪಂಡಿತನು.

ಆತನು ಪತ್ನಿ ಕುಲವನಿತಾ ಶ್ರೇಷ್ಠ ಪತ್ನ, ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗ ಸಾಧನೆಯಲ್ಲಿ ಆಸಕ್ತಳು, ಸಾಧ್ವೀ, ಒಳ್ಳೆಯ ಆಕಾರ, ಆಕೃತಿಯುಳ್ಳವಳು, ಸನ್ನಡತೆ, ಸುಶೀಲದಿಂದ ಕೂಡಿದವಳು, ಜಿನೇಂದ್ರನ, ಪಾದ ಕಮಲಗಳಲ್ಲಿ ಭಕ್ತಿಯಿಂದ ಮಹಾ ಪ್ರಸಿಧ್ಧಳು.ಚಿಕ್ಕತಾಯಿ ಎಂಬ ಹೆಸರಿನಿಂದ ಪ್ರಸಿದ್ಧಳು.

ಶಾಲಿವಾಹನ ಶಕ ವರ್ಷ 1103ನೇ ಪ್ಲವ ಸಂವತ್ಸರದ ಅಶ್ವಯುಜ ಮಾಸದ ಶುಕ್ಲ ಪಕ್ಷದ ದಶಮಿ ಗುರುವಾರ ಕ್ರಿ.ಶ.1181ನೇ ಸೆಪ್ಟೆಂಬರ್ 19ನೇ ಶನಿವಾರದಂದು ಪಂಚಪರ್ವಗಳಲ್ಲಿ ಕನಕಗಿರಿಯ ಪಾರ್ಶ್ವನಾಥನ ಪೂಜಾರ್ಥವಾಗಿಯೂ ಮುನಿಗಳ ನಿತ್ಯದಾನ-ಆಹಾರ ದಾನಕ್ಕಾಗಿಯೂ ನಿರಂತರವಾದ ಶಾಸ್ತ್ರ ದಾನಕ್ಕಾಗಿಯೂ, ಕಿನ್ನರಿಪುರದ ಚಿಕ್ಕತಾಯಿ ಎಂದೇ ಖ್ಯಾತಳಾದ ಧರಣೀ ಪಂಡಿತನ ಧರ್ಮಪತ್ನಿ ಚಿಕ್ಕತಾಯಿಯು ಕಿನ್ನರಿಪುರವನ್ನು ಅಚ್ಚುತರಾಯನ ಮಗನಿಂದ ದೇವಾಲಯಕ್ಕೆ ಸರ್ವಸಾಮಾನ್ಯವಾಗಿ ಬಿಡಿಸಿದಳು. ಅವರ ಆ ದಂಪತಿಗಳ ಮಗನು ಸಹಕಾರದ ಸುಮನಸ್ಸಿನವನು, ಬಂಧುಪೋಷಕನೂ, ಹೃದಯವಂತಿಕೆ ಉಳ್ಳವನು, ಪೂಜ್ಯನೂ ವೈದ್ಯರಾಜನು, ತತ್ವಶೀಲನು "ವಿದ್ಯಾಸಾಗರವೆಂಬ" ಹೆಸರಿನಿಂದ ಶೋಭಿಸುತ್ತಾನೆ.

ಸಂಸ್ಕೃತ ನಾಟಕಕಾರನಾದ ಹಸ್ತಿಮಲ್ಲಾಚಾರ್ಯನು ಶಕ 1211 ರಲ್ಲಿ (ಕ್ರಿ.ಶ.1289) ಪಾರ್ಶ್ವನಾಥಸ್ವಾಮಿಯ ಪ್ರತಿಮೆಯನ್ನು ಅಥವಾ ಬಿಂಬವನ್ನು ಪ್ರತಿಷ್ಠಾಪನೆ ಮಾಡಿಸಿದನು.ಈತನ ಹಿರಿಯ ಮಗ ಪಾರ್ಶ್ವಪಂಡಿತನ 2ನೇ ಮಗ ಚಂದ್ರನಾಥನು ಹೇಮಾಚಲದಲ್ಲಿ (ಕನಕಗಿರಿ) ಇದ್ದನು.

ಕ್ರಿ.ಶ.1293ನೇ ಇಸವಿಯಲ್ಲಿ ಮೇಲೆ ಹೇಳಿದ ಛಲದಂಕಪುರಕ್ಕೆ ಒಂದು ಸಾವಿರ ವರ್ಷ ತುಂಬಲು ಈ ಗ್ರಾಮ ಶಾಂತಿಯಿಂದ ಕೂಡಿರುವುದಿಲ್ಲವೆಂದು ನಂಬಿದ ಜನರು ಬೇರೆ ಮಾಡುವುದಿಲ್ಲವೆಂದು ತಿಳಿದು "ಅಬ್ಬಾಗಿಲು" ಎಂಬ ಗ್ರಾಮದಿಂದ ಬಂದ ಲಿಂಗೇಗೌಡ ಮತ್ತು ಶಾನುಭೋಗ ಬೊಮ್ಮರಸಯ್ಯ ಹೊಸ ಗ್ರಾಮವೊಂದನ್ನು ಈ ಕ್ಷೇತ್ರಕ್ಕೆ ಸ್ವಲ್ಪ ದೂರದಲ್ಲಿ ಹೊಸ ಭೂಮಿಯಲ್ಲಿ "ಮಲೆಯೂರು" ಎಂಬ ಹೆಸರಿನಿಂದ ನಾಮಾಂಕಿತಗೊಂಡ ಕಟ್ಟಿದರೆಂದು ದೇವಚಂದ್ರನು ತನ್ನ ಕೃತಿಯಲ್ಲಿ ವಿವರಿಸಿದ್ದಾನೆ.

ಕ್ರಿ.ಶ.1355ನೇ ಇಸವಿಯಲ್ಲಿ ಲಲಿತಕೀರ್ತಿಗಳೆಂಬ ಭಟ್ಟಾರಕರು ಈ ಕ್ಷೇತ್ರಕ್ಕೆ ಸೇರಿದ ಗುಂಡಿನಲ್ಲಿ ಪಾರ್ಶ್ವನಾಥಸ್ವಾಮಿ, ಬ್ರಹ್ಮದೇವರು ಈ ಬಿಂಬಗಳನ್ನು ಪ್ರತಿಷ್ಠೆ ಮಾಡಿಸಿದರು. ಈ ವಿಷಯವು ಮಲೆಯೂರಿನ ಶಾಸನ 365ರಲ್ಲಿ ಉಲ್ಲೇಖವಾಗಿರುವುದು ಕಂಡುಬರುತ್ತದೆ.

ವಿಜಯನಗರದ 2ನೇ ದೇವರಾಯನ ಮಗ 2ನೇ ಹರಿಹರ ಅಥವಾ ಕುಮಾರ ಹರಿಹರರಾಯ ಒಡೆಯರು ಮಲೆಯೂರು ಗ್ರಾಮವನ್ನು "ಹುಣಸೂರಪುರ" ಎಂಬ ಹೆಸರಿನಿಂದ ಕರೆದಿದ್ದರು. ಅದರ ಉಪಗ್ರಾಮವನ್ನು ಅವುಗಳ ಎಲ್ಲಾ ಬಗೆಯ ಜಮೀನು ಮತ್ತು ತೆರಿಗೆಗಳೊಂದಿಗೆ ತ್ರಿಯಂಬಕ ದೇವರ ಸನ್ನಿದಿಯಲ್ಲಿ ಕನಕಗಿರಿಯ ವಿಜಯನಾಥ ದೇವರಿಗೆ ಶ್ರೀವಿಜಯ ಪಾರ್ಶ್ವನಾಥ ಸ್ವಾಮಿಗೆ ಸರ್ವಮಾನ್ಯವಾಗಿ ಬಿಡಿಸಿದರು.ಈ ಮೊದಲೇ ಕುಲಗಾಣದ ವಾಸುದೇವ ದೇವರಿಗೆ ಕೊಟ್ಟಿರುವ ಗ್ರಾಮದ ಮುಂದಿನ ಕೆರೆ, ಕೆಳಗಿನ ಗದ್ದೆ ಈ ಸರ್ವಮಾನ್ಯಕ್ಕೆ ಸೇರಿದ್ದು ಈ ಗ್ರಾಮಗಳು ತೆರಕಣಾಂಬಿ ರಾಜ್ಯದ ಕುಲಗಾಣ ಪ್ರಾಂತ್ಯದ ರಾಜಕುಮಾರನ ಆಳ್ವಿಕೆಗೆ ಒಳಪಟ್ಟವವಾಗಿದ್ದವು.ಈ ವಿಷಯವು ಬಸದಿಯೊಂದರ ತಾಮ್ರಶಾಸನದಲ್ಲಿ ಪ್ರತಿಪಾದಿತವಾಗಿದೆ.

ಕ್ರಿ.ಶ.1557ರ ಹೊತ್ತಿಗೆ ರಾಜಾಶ್ರಯ ತಪ್ಪಿಹೋಗಿ ಕನಕಗಿರಿ ಕ್ಷೇತ್ರಕ್ಕೆ ಸೇರಿದ್ದು ಗ್ರಾಮಗಳು ಕೈಬಿಟ್ಟು ಹೋದವು.ಇದರಿಂದಾಗಿ ಪೂಜೆಗೆ ತೊಂದರೆ ಉಂಟಾಯಿತು.ಕ್ರಿ.ಶ.1578 ರಲ್ಲಿ ಕುಲಗಾಣದ ರಾಮ ಒಡೆಯನೆಂಬುವನು ಈ ಕ್ಷೇತ್ರಕ್ಕೆ 48 ವರಹ ಆದಾಯ ಬರುವಂತೆ ಮಾಡಿದನು.ಕ್ರಿ.ಶ.1614ನೇ ಇಸವಿಯ ಹೊತ್ತಿಗೆ, ಈ ಆದಾಯವು ಇಳಿಮುಖವಾಗುತ್ತಾ ಬಂದು, ಹನ್ನೆರಡು ವರಹಾಗಳಿಗೆ ನಿಂತಿತೆಂದು ತಿಳಿದುಬರುತ್ತದೆ.

ಕ್ರಿ.ಶ.1629ನೇ ಇಸವಿಯಲ್ಲಿ ಮೈಸೂರು ರಾಜ ಒಡೆಯರ ಕರಣಿಕನಾಗಿದ್ದ ತಂಬಡಹಳ್ಳಿಯ ದೊಡ್ಡಶಾಂತಯ್ಯ ಮತ್ತು ಬೆಳಗೊಳದ ಧರಣಿ ಪಂಡಿತ ಇವರು ಅರಸರಲ್ಲಿ ಅರಿಕೆ ಮಾಡಿ,

ಕುಲಗಾಣದ ಅರಸರಿಗೆ ಸೇರಿಹೋಗಿದ್ದ ಮಲೆಯೂರು ಗ್ರಾಮವನ್ನು ಪುನಃ ಬಿಡಿಸಿದರು.ಅಲ್ಲದೇ ದೇವಸ್ಥಾನದ ಸುತ್ತಲೂ ಇದ್ದ ಎಸಳಿಗೆ ಬೇಲಿಯನ್ನು ತೆಗೆಯಿಸಿ, ಸುತ್ತಲೂ ಕಲ್ಲುಕೋಟೆ ಹಾಕಿಸಿ, ಹೊರಮಂಟಪ ಚಪ್ಪರ ಮಂಟಪ, ಅಡುಗೆ ಮನೆ, ಉಗ್ರಾಣ ಇವನ್ನು ಕಟ್ಟಿಸಿದರು.ಈಸರ್ವಮಾನ್ಯ ಗ್ರಾಮವು ಸುಮಾರು 77 ವರ್ಷ ನಡೆದು ಬಂದು ಮುಂದೆ ಈ ಗ್ರಾಮವೂ ಸಹ ಕೈತಪ್ಪಿಹೋಯಿತು.

ಕ್ರಿ.ಶ.1674ನೇ ಇಸವಿಯಲ್ಲಿ ಚಂದಕೀರ್ತಿ ದೇವರ ಶಿಷ್ಯ ಕೂಚಿರಾಜನು ಚಂದ್ರಪ್ರಭ ಸ್ವಾಮಿಯವರ ಬಿಂಬವನ್ನು ಮಾಡಿಸಿದನು.ಇದೇ ಕಾಲದಲ್ಲಿ ದೇವಾಲಯದ ಉತ್ತರಕ್ಕಿರುವ ಗುಂಡಿನಲ್ಲಿ ಪಾರ್ಶ್ವನಾಥ ಸ್ವಾಮಿಯವರನ್ನು 3 ಹೆಡೆ ಸರ್ಪದ ಪ್ರತಿಮೆಯನ್ನು ಉಬ್ಬುಶಿಲ್ಪವಾಗಿ ಬಿಡಿಸಿ ಪ್ರತಿಷ್ಠಾಪನೆ ಮಾಡಿಸಿದರು. ಅಂದಿನಿಂದ ಈ ಗುಡಿಗೆ "ಉರಿಸಿಂಗಿ ಬೆಟ್ಟ" ಎಂದು ಹೆಸರಾಯಿತು. ಇದಕ್ಕೆ ಈಗಲೂ ಪೂಜೆ ನಡೆಯುತ್ತಿದೆ.

ಕ್ರಿ.ಶ.1698ನೇ ವರ್ಷದಲ್ಲುಂಟಾದ ಮತೀಯ ಗಲಭೆಯಿಂದಾಗಿ ದೇವಾಲಯದ ಮಧ್ಯದ ಅಂಕಣ ಬಿದ್ದು ಪೂಜೆಗೆ ತೊಂದರೆಯಾಯಿತು. ಕ್ರಿ.ಶ.1706ರಲ್ಲಿ ಟಂಕಸಾಲೆ ಅಣ್ಣಯ್ಯ ಶೆಟ್ಟಿ ಎಂಬುವನು ಕಂಠೀರವ ನರಸರಾಜ ಒಡೆಯವರಲ್ಲಿ ಅರಿಕೆ ಮಾಡಿ ಮಲೆಯೂರನ್ನು ಪುನಃ ಕನಕಗಿರಿಗೆ ಬಿಡಿಸಿದನು.

ಕ್ರಿ.ಶ.1707ನೇ ಇಸವಿಯಲ್ಲಿ ಮೈಸೂರು ಅರಸರ ಅಪ್ಪಣೆಯಂತೆ ಟಂಕಶಾಲೆಯಲ್ಲಿ ಅಣ್ಣಯ್ಯಶೆಟ್ಟಿ ಎಂಬವವರು ಬಿದ್ದು ಹೋಗಿದ್ದ ಮಧ್ಯದ ಅಂಕಣವನ್ನು ಜೀರ್ಣೋದ್ಧಾರ ಮಾಡಿಸಿ ತೆರಕಣಾಂಬಿಗೆ ಸಲ್ಲುವ ಹುಲ್ಲು, ಹಣ ಮುಂತಾದವುಗಳನ್ನು ಕೂಡಿಸಿ 250 ವರಾಹಗಳವರೆಗೂ ಆದಾಯ ಬರುವಂತೆ ಮಾಡಿದ.

ಕ್ರಿ.ಶ.1770ರಲ್ಲಿ ಶ್ಯಾನುಭೋಗ ಇಜ್ಜಪ್ಪನೆಂಬುವನು ಉತ್ತರದ ಹೊರಭಾಗದ ಕೋಟೆಬಾಗಿಲು, ಮಂಟಪ ಇವನ್ನು ಮಾಡಿಸಿದನು. ಮೈಸೂರು ಒಡೆಯರಾದ ಖಾಸಾ ಚಾಮರಾಜ ಒಡೆಯರ್; (ಕ್ರಿ.ಶ.1776–1796) ರವರ ಧರ್ಮಪತ್ನಿಯಾದ ದೇವೀರಮ್ಮಣಿಯವರು ಧರಣೇಂದ್ರರ ಬಿಂಬವನ್ನು ಪ್ರತಿಷ್ಠಾಪನ ಮಾಡಿಸಿ. ಪದ್ಮಾವತಿ ಅಮ್ಮನವರಿಗೆ ನಗಗಳನ್ನು ದೇವಸ್ಥಾನಕ್ಕೆ ಪಾತ್ರೆಗಳನ್ನು ಮಾಡಿಸಿ ಅಗತ್ಯವಾದ ಸೌಕರ್ಯವನ್ನು ಒದಗಿಸಿದರು.

ಅನಂತರ ಕ್ರಿ.ಶ.1784ರ ಸುಮಾರಿನಲ್ಲಿ ಟಿಪ್ಪುಸುಲ್ತಾನನ ಕಾಲದಲಲಿ ಮಲೆಯೂರು ಗ್ರಾಮವು ಸರ್ಕಾರಕ್ಕೆ ಸೇರಿಹೋಗಿ ಈ ಕ್ಷೇತ್ರಕ್ಕೆ ಬರುತ್ತಿದ್ದ ಆದಾಯವೆಲ್ಲ ನಿಂತುಹೋಗಿ ಪೂಜೆಗೆ ತೊಂದರೆಯಾದರೂ ದೇವಾಲಯದ ಪೂಜೆ ಮಾತ್ರ ನಿಲ್ಲಲಿಲ್ಲ.

ಹೀಗೆ ನಡೆದು ಬರುತ್ತಿದ್ದ 1721 ಶಕವರ್ಷ ಸಿದ್ಧಾರ್ಥಿ ನಾಮಸಂವತ್ಸರ ಅಂದರೆ ಕ್ರಿ.ಶ. 1799ರಲ್ಲಿ ಶ್ರೀರಂಗಪಟ್ಟಣವು ಇಂಗ್ಲೀಷರ ವಶವಾಗಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕವಾಗಿ ಪೂರ್ಣಯ್ಯ ನವರು ದಿವಾನರಾದಾಗ ಈ ಕ್ಷೇತ್ರಕ್ಕೆ 6 ವರಾಹ ವರಮಾನ ಸಲ್ಲುವಂತೆ ಮಾಡಿದರು.ಈ ಕಾಲದಲ್ಲಿ ಮಹಾಮಾತೃ ಶ್ರೀ ದೇವೀರಮ್ಮಣ್ಣಿಯವರು ಈ ಕ್ಷೇತ್ರದಲ್ಲಿ ಧರಣೇಂದ್ರ ಪದ್ಮಾವತಿ ಅಮ್ಮನವರ ಬಿಂಬಗಳನ್ನ ಪ್ರತಿಷ್ಠಾಪನೆಯನ್ನು ಮಾಡಿದರು.ಅಷ್ಟೇ ಅಲ್ಲದೇ ಪದಾರ್ಚನೆಗಾಗಿ ದೀಪದ ಕಂಬಗಳು ಮತ್ತು ಕೆಲವು ಆಭರಣಗಳನ್ನು ಒಪ್ಪಿಸುತ್ತಾರೆ.

ಮುಂದೊಮ್ಮೆ 1803ರಲ್ಲಿ ದೇವಾಲಯದ ಆದಾಯವು ವರ್ಷಕ್ಕೆ 3 ವರಾಹಗಳಿಗೆ ಇಳಿಯಿತು.ಕ್ರಿ.ಶ.1818 ನೇ ಇಸವಿಯಲ್ಲಿ ಅದುವರೆಗೂ ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ್ದ ಮಲೆಯೂರು ಗ್ರಾಮ ಮತ್ತು ಅದರ ಅಕ್ಕ–ಪಕ್ಕದ ಊರುಗಳು ಚಾಮರಾಜನಗರ ತಾಲ್ಲೂಕಿಗೆ ಸೇರಿದಾಗ ಅಲ್ಲಿಯವರೆವಿಗೂ ಕ್ಷೇತ್ರಕ್ಕೆ ಬರುತ್ತಿದ್ದ 3 ವರಹಾ ಆದಾಯವೂ ನಿಂತುಹೋಯಿತು. ಆದರೂ ಅರ್ಚಕರೂ ಪೂಜೆಯನ್ನು ಎಂದೂ ನಿಲ್ಲಿಸಲಿಲ್ಲ.

ಕ್ರಿ.ಶ.1760ರಲ್ಲಿ ಸ್ವಸ್ತಿ ಶ್ರೀ ವರ್ಧಮಾನಾರಾಭ್ಧ 2500 ವಿಳಂಬಿ ಸಂವತ್ಸರದ ವೈಶಾಖ ಶುದ್ಧ ಅಕ್ಷಯ ತದಿಗೆಯ ಗುರುವಾರ ಶ್ಯಾನುಭೋಗ ದೇವಚಂದ್ರನು ತನ್ನ ಪಿತೃ ಸಂತಾನವನ್ನು ಬರೆಯಿಸಿದನು. ಈ ಕುರಿತ ವಂಶವೃಕ್ಷ ಬರೆದಿರುವ ಬಗ್ಗೆ ನಿಖರವಾದ ಆಧಾರಗಳು ಲಭ್ಯವಾಗಿಲ್ಲ.

ಕ್ರಿ.ಶ್.1824ರಲ್ಲಿ ಚಾಮರಾಜನಗರ ಬಸ್ತಿ ಭುಜಂಗಯ್ಯ ಮತ್ತು ಆತನ ಮಗ ಸೂರಿ ಪಂಡಿತನು ತನಗೆ ಅರಮನೆಯಿಂದ ಬರುತ್ತಿದದ 15 ವರಹ ಸಂಬಳವನ್ನು ಒಳನಾಡಿನ ಜಿನಾಲಯಗಳಿಗೆ ವರಮಾನವೇ ಇಲ್ಲದ ಪ್ರಯುಕ್ತ ಹಂಚಿಕೊಡಬೇಕೆಂದು ಅಂದಿನ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯವರಲ್ಲಿ ಅರಿಕೆ ಮಾಡಿಸಿದರು.ಆಗ ಸೂರಿ ಪಂಡಿತನ ಬೇಡಿಕೆಯನ್ನು ಮನ್ನಿಸಿ ಆತನ ವರಮಾನದ 15 ವರಹಾವನ್ನು ಆದಾಯವಿಲ್ಲದ ಒಳನಾಡಿನ 25 ಜಿನಾಲಯಗಳಿಗೆ ಸಮನಾಗಿ ಹಂಚಿಮುಜರಾಯಿ ಸರ್ಕಾರಕ್ಕೆ ಸೇರಿಕೊಂಡಾಗ ಈ ಕ್ಷೇತ್ರಕ್ಕೆ ಪ್ರತಿ ತಿಂಗಳು 15 ಹಣ ಬರುವಂತಾಯಿತು.

ಒಡೆಯರ ಕಾಲದ ಪ್ರಮುಖ ಜೈನರಾದ ಅರಮನೆ ಲಕ್ಷ್ಮೀ ಪಂಡಿತ, ಸೂರಿ ಪಂಡಿತ, ಧರ್ಮ ಸಾಮ್ರಾಜ್ಯ ಪಂಡಿತ ಮತ್ತು ಮಧುಗಿರಿ ಬ್ರಹ್ಮಯ್ಯ ಇವರಲ್ಲಿ ಸೂರಿಪಂಡಿತ ಮತ್ತು ಲಕ್ಷ್ಮೀಪಂಡಿತರಿಬ್ಬರೂ ಸೇರಿ ಮಹಾಸ್ವಾಮಿಯವರಲ್ಲಿ ಪ್ರಾರ್ಥಿಸಿ ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಆಗಿನ ಶ್ರೀಮಠಾಧ್ಯಕ್ಷರಾಗಿದ್ದ ಸ್ವಸ್ತೀ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರ ಆಶೀರ್ವಾದದಿಂದ ಶ್ರೀ ಮಠಕ್ಕೆ ಸೇರಿದ 32 ದೇವಸ್ಥಾನಗಳ ಜೊತೆಗೆ ಈ ಕನಕಗಿರಿ ಕ್ಷೇತ್ರವನ್ನು ಸೇರಿಸಿ ಬರುವ ಆದಾಯವನ್ನು 33 ದೇವಾಲಯಗಳಿಗೆ ಹಂಚುವಂತೆ ಮಾಡಿದರು. ಅದರಂತೆ ಕನಕಗಿರಿ ಕ್ಷೇತ್ರಕ್ಕೆ ದೀಪಾರಾಧನೆಗೆ ಪ್ರತಿ ತಿಂಗಳು 10ರೂ ಸಂದಾಯವಾಗುತ್ತಿತ್ತು.ಈಗ ಪ್ರತಿ ತಿಂಗಳು 20ರೂ ಸಂದಾಯವಾಗುತ್ತಿದೆ.

ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಈಗಿನ ಶ್ರೀ ಮಠಾಧ್ಯಕ್ಷರಾಗಿರುವ ಸ್ವಸ್ತೀ ಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸೌಆಮಿಗಳವರು ಈ ಕನಕಗಿರಿ ಕ್ಷೇತ್ರವನ್ನು "ಶ್ರವಣ ಬೆಳಗೊಳ ದಿಗಂಬರ ಜೈನ ಮುಜರಾಯಿ ಸಂಸ್ಥೆಗಳ ಆಡಳತ ಮಂಡಳಿಯ" ಮೇಲ್ವಿಚಾರಣೆಗೆ ಒಳಪಡಿಸಿ ಅಲ್ಲಿನ ಅರ್ಚಕರಿಗೆ 1995 ಏಪ್ರಿಲ್ 1ನೇ ಮಾಹೆಯಿಂದ 1000/– ರೂ ವೇತನ ಕೊಡುತ್ತಿದ್ದು ಪಡಿತರಕ್ಕಗಿ ಪ್ರತಿ ತಿಂಗಳು 150 ರೂ ಗಳನ್ನು ನೀಡುತ್ತಿದ್ದಾರೆ.

ಹೀಗೆ ಸುಮಾರು ನಿಗ್ರಂಥ 50 ವರ್ಷಗಳ ಹಿಂದೆ ಶ್ರೀ ಕ್ಷೇತ್ರಕ್ಕೆ ಶ್ರೀ.108 ಚಂದ್ರಸಾಗರ ನಿಗ್ರಂಥ ಮಹಾಮುನಿಗಳ ಮಂಗಳಕರವಾದ ಪ್ರವೇಶವಾಯಿತು. ಅಂದಿನಿಂದ ಕ್ಷೇತ್ರಾಭಿವೃದ್ಧಿ ಕಾರ್ಯಗಳು ಪುನರಾರಂಭಗೊಂಡವು. ಪೂಜ್ಯರು ಕ್ಷೇತ್ರದಲ್ಲಿ ವಾಸ್ತವ್ಯ ಮಾಡಿದ್ದ ಸುಮಾರು 21 ವರ್ಷಗಳ ಕಾಲಾವಧಿಯಲ್ಲಿ ಇಂದು ಕಾಣುತ್ತಿರುವ ಅಭಿವೃದ್ಧಿಗೆ ಮೂಲ ಮತ್ತು ಅಡಿಪಾಯವನ್ನು ಹಾಕಲಾಯಿತು. ದೇವಾಲಯಕ್ಕೆ ವಿದ್ಯುದೀಪ, ದೇವಾಲಯದ ಒಳಗಿನ ಮತ್ತು ಹೊರಗಿನ ನೆಲವನ್ನೆಲ್ಲಾ ಉತ್ತಮ ಪಡಿಸಿದರು. ಬೆಟ್ಟಕ್ಕೆ ಸೋಪಾನಗಳನ್ನು ಮಾಡಿಸಿ 24 ತೀರ್ಥಂಕರರ ಪಾದುಕೆಗಳಿರುವ ಎಡೆಯನ್ನು ಉತ್ತಮ ಪಡಿಸಿ ರಕ್ಷಿಸಿದ್ದು, ಪಾರ್ಶ್ವ ತೀರ್ಥಂಕರರ ಮೋಕ್ಷ ಕಲ್ಯಾಣ ಪೂಜೆಯನ್ನು ಮಡಿಸಿದ್ದು ಹೀಗೆ ಹಲವು ರೀತಿಯ ಅಭಿವೃದ್ಧಿ ಕಾರ್ಯಗಳು ನಡೆದವು. 1991 ಮಾರ್ಚ್ 7ರ ಗುರುವಾರದಂದು ಪೂಜ್ಯರು ಶ್ರೀ ಕ್ಷೇತ್ರವನ್ನು ಬಿಟ್ಟು ಹೊರಡುವಂತಾದುದು ದೌರ್ಭಾಗ್ಯವೆಂದೇ ಹೇಳಬಹುದು.

ಇದನ್ನು ಮನಗಂಡ ಶ್ರವಣಬೆಳಗೊಳದ ಪೂಜ್ಯ ಶ್ರೀಯವರು ತಮ್ಮ ಚಿಂತನೆಯ ಫಲವಾಗಿ 1997 ಜೂನ್ 12ರ ಗುರುವಾರದ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮಿಗಳವರನ್ನು ಪ್ರಾತಃ ಕಾಲದಲ್ಲಿ ಈ ಕ್ಷೇತ್ರಕ್ಕೆ ಪ್ರವೇಶ ಮಾಡಿಸಿ ಪೂಜಾನಂತರ ನಡೆದ ಸಮಾರಂಭದಲ್ಲಿ ತಮ್ಮ ಶ್ರೀಮಠದ ಶಾಖೆಯನ್ನು ತೆರೆದು

ಶ್ರೀ.ಸ್ವಾಮಿಗಳವರನ್ನೇ ಅದರ ಭಟ್ಟಾರಕರನ್ನಾಗಿ ಮಾಡಿ ಕ್ಷೇತ್ರಾಭಿವೃದ್ಧಿಗೆ ನಾಂದಿ ಹಾಡಿದರು.

**ಪರಮಾರ್ಶನ ಗ್ರಂಥಋಣ**


1. ಎಪಿಗ್ರಾಫಿಯ ಕರ್ನಾಟಕ, ಸಂಪುಟ –4– ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
2. ಮಲೆಯೂರು ಬೆಟ್ಟದ ಚರಿತ್ರೆ –ಪ್ರಕಾಶನ ಕನಕಗಿರಿ ಕ್ಷೇತ್ರ ಸೇವಾಸಮಿತಿ, ಮಲೆಯೂರು
3. ರಾಜಾವಳ ಕಥಾಸಾರ – ಸಂಗ್ರಹ, ಬಿ.ಎಸ್.ಸಣ್ಣಯ್ಯ
4. ವಕ್ರರೇಖೆ – ಹರೀಶ್, ದೇಶೀ ಪುಸ್ತಕ ಮಾಲೆ ಬೆಂಗಳೂರು – 2009
5. ಸಂಸ್ಕೃತ ವಾಙ್ಮಯಕ್ಕೆ ಜೈನಕವಿಗಳ ಕಾಣಿಕೆ –ಪಂಡಿತ್ ಕೆ.ಭುಜಬಲಿಶಾಸ್ತ್ರಿ
6. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ.ಮುಗಳಿ
7. ಮಲೆಯೂರು ಬೆಟ್ಟದ ಚರಿತ್ರೆ – ಬಿ.ಪದ್ಮರಾಜ ಪಂಡಿತ
8. ಮಾಹಿತಿ ಸಂಗ್ರಹಣೆ – ದಿ॥ ಪಾ ನಾಗರಾಜಯ್ಯ ಕನ್ನಡ ವಿದ್ವಾಂಸರು, ಮೈಸೂರು
9. ಹೊನ್ನುಹೊಳೆ – ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಪುಟ–2006 ಚಾಮರಾಜನಗರ, ಪ್ರಧಾನ ಸಂಪಾದಕರು ; ಮಲೆಯೂರು ಗುರುಸ್ವಾಮಿ ಸಂಪಾದಕರು : ಸೋಮಶೇಖರ್, ಬಿಸಲ್ವಾಡಿ